ಮಲೆನಾಡಿನ ಕೃಷಿ ಜೀವನಾನುಭವದ ಬುತ್ತಿಯೊಂದಿಗೆ ಶರತ್ ಕಲ್ಕೋಡ್ ಬರವಣಿಗೆಯ ಪಯಣ ನಡೆಸಿದವರು. ಪತ್ರಿಕೋದ್ಯಮದಲ್ಲೂ ಸಾಹಿತ್ಯ ಕ್ಷೇತ್ರದಲ್ಲೂ ಕೃಷಿ ಮಾಡಿರುವ ಅವರ ಕೃತಿಗಳು ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ ಭಾಷೆಗಳಿಗೆ ಅನುವಾದಗೊಂಡಿವೆ. 'ಕಾಡೇ... ಗೂಡೇ..' (ಕಾದಂಬರಿ), 'ಆವರ್ತನ', 'ಕದರಡಿಕೆ' (ಕಥಾಸಂಕಲನಗಳು), 'ಅಂತರ', 'ಸಾಲು ಸಾಲು ಹಕ್ಕಿ ಸಾಲು' (ಕವನ ಸಂಕಲನಗಳು), ಎಸ್.ಕೆ. ಕರೀಂಖಾನ್, ಗಿರೀಶ ಕಾಸರವಳ್ಳಿ (ವ್ಯಕ್ತಿಚಿತ್ರಗಳು), 'ಸಿಂಗಾರ–ಬಂಗಾರ' (ಅಡಿಕೆ ಕುರಿತ ಅಧ್ಯಯನ ಗ್ರಂಥ) ಕೃತಿಗಳನ್ನು ಪ್ರಕಟಿಸಿದ್ದಾರೆ.

ಬಿಸಿಲು, ಬೆಂಕಿಯೆನ್ನದೆ, ಕಾಲಿಗೆ ಚಕ್ರಕಟ್ಟಿಕೊಂಡು ಊರು ಪರವೂರು ಲೆಕ್ಕಿಸದೆ ಹತ್ತು ಮನೆ ಮೆಟ್ಟಲು ಹತ್ತಿಳಿದು. ಕೊಟ್ಟ ಹಣಕ್ಕೆ ರಸೀದಿ ಹರಿದು ಕೊಟ್ಟ. ಒಂದುಕಾಸೂ ಅತ್ತಿತ್ತ ಪೋಲಾಗದಂತೆ ಎಚ್ಚರ ವಹಿಸಿ, ದೇವತಾ ಕಾರ್ಯಕ್ಕೆ ಸದ್ವಿನಿಯೋಗಿಸಿ ನೋಡುನೋಡುತ್ತಿದ್ದಂತೆ, ಗರ್ಭಗುಡಿ, ಗೋಪುರ, ಚೌಕಿ, ದ್ವಾರಬಾಗಿಲು ಸಕಲ ಸಮಸ್ತವೂ ಆರೆಂಟು ತಿಂಗಳಲ್ಲಿ ಸಂಪನ್ನಗೊಂಡು ಪುನರ್‌ಪ್ರತಿಷ್ಠಾಪನಾ ಮುಹೂರ್ತವೂ ನಿಗದಿಯಾಯಿತು. ಬಾರಕೂರ ಅಡಿಗಳ ನೇತೃತ್ವದಲ್ಲಿ ನಡೆಯುವ ಹೋಮಹವನ, ಗೋಪುರ ಕಲಶ ಪ್ರತಿಷ್ಠಾಪನೆ ಸರ್ವ ಮಂಗಲಕಾರ್ಯ ಶೇಷಪ್ಪನ ಅಧ್ವರ್ಯದಲ್ಲೇ ನಡೆಯುವ ಬಗ್ಗೆ ಯಾರ, ಯಾವುದೇ ಬಗೆಯ ಚಕಾರಗಳಿರಲಿಲ್ಲ. ದೇಗುಲದ ಜೀರ್ಣೋದ್ಧಾರದ ಸಮಸ್ತ ಜವಾಬ್ದಾರಿ ಹೊತ್ತವನು ಅವನೇ ಅಲ್ಲವೇ?

ಪುನರ್‌ಪ್ರತಿಷ್ಠಾಪನೆಯ ಹಿಂದಿನ ದಿನ ಕುಟುಂಬದಲ್ಲಿ ಮಗು ಜನಿಸಿ, ಅಚಾನಕ ಅವಘಡಕ್ಕೆ ನಾಂದಿ ಹಾಡಬೇಕೇ? ಮಂಗಲಕಾರ್ಯಗಳೆಲ್ಲ ಶೇಷಪ್ಪನ ನೇತೃತ್ವದಲ್ಲಿ ನಡೆಯುವುದೆ, ಇಲ್ಲವೇ? ಊರಲ್ಲೆಲ್ಲಾ ದೊಡ್ಡ ಪ್ರಶ್ನೆ, ಚರ್ಚಾ ವಿಷಯ. ಆದರೆ, ಶೇಷಪ್ಪ ಆ ಬಗ್ಗೆ ಬಿಲ್ಕುಲ್ ತಲೆ ಕೆಡಿಸಿ ಕೊಳ್ಳಲೇಇಲ್ಲ. ಗೋತ್ರಸೂತಕ ಹರಿದುಕೊಂಡು, ಕುಟುಂಬದ ಎಲ್ಲ ಸಂಬಂಧ ಕಡಿದುಕೊಂಡು ಬಿಟ್ಟರೆ ಆಯ್ತಲ್ಲಾ. 'ಪ್ರತಿಷ್ಠಾಪನಾ ಕಾರ್ಯ ನಿರ್ವಿಘ್ನವಾಗಿ ನೆರವೇರಿಸಬಹುದು ತಾನೇ. 'ಆಗಬಹುದು... ಖಂಡಿತಾ ಆಗಬಹುದು' ಎಂದು ಗೋಪಾಲಭಟ್ಟರ ವಕಾಲತ್ತು ಬೇರೆ. ಅಂದ ಮೇಲೆ 'ನನ್ನ ಅಧ್ವರ್ಯದಲ್ಲೇ ನಡೆಯುವುದು ಶತಸ್ಸಿದ್ಧ' ಎಂದು ಸವಾಲೆಸೆದು ಸೆಟೆದು ನಿಂತ.

'ಗೋತ್ರ ಹರಿದುಕೊಳ್ಳುವುದೆಂದರೆ ಹುಡುಗಾಟಿಕೆ ಮಾತಲ್ಲ. ಅದು ಧರ್ಮ ಶಾಸ್ತ್ರಕ್ಕೆ ವಿರುದ್ಧ', 'ನಿನ್ನ ಸಂಸಾರದ ಭವಿಷ್ಯಕ್ಕೆ ನೀನೇ ಕೊಡಲಿ ಏಟು ಹಾಕಿ ಕೊಳ್ಳುತ್ತೀಯಾ...', 'ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ವರ್ತಿಸಬೇಡ...', 'ಬೇಡ, ಕುಲಘಾತಕ ಶಾಪಕಳಂಕ, ನಿನ್ನ ಮುಂದಿನ ತಲೆಮಾರಿಗೆ ತಟ್ಟದೇ ಬಿಡಲ್ಲ...' ಇತ್ಯಾದಿ ಇತ್ಯಾದಿ ಹಿರಿಯರ ಹಿತನುಡಿ, ಟೀಕೆಟಿಪ್ಪಣಿಗಳಿಗೆ ಶೇಷಪ್ಪ ತಲೆ ಕೆಡೆಸಿಕೊಂಡಿದ್ದರೆ ಕೇಳಿ. ಎಲ್ಲವುದಕ್ಕೂ ಡೋಂಟ್ ಕೇರ್. ಛಲ ಬಿಡದೇ ನಿಷ್ಠೂರವಾಗಿ ಕುಟುಂಬದ ನಂಟು ಕಡಿದುಕೊಂಡು, ಹಟ ಸಾಧಿಸಿಯೇ ಬಿಟ್ಟ.

ಇಂಥ ಕುಲಘಾತಕನನ್ನು ವಂಶವೃಕ್ಷಕ್ಕೆ ಸೇರಿಸುವ ಬಗ್ಗೆ ತಕರಾರೆದ್ದದ್ದು!

ಆದರೆ, ಅದೊಂದೇ ವಿಷಯದಿಂದ ಶೇಷಪ್ಪನ ಕರಳುಬಳ್ಳಿ ಸಂಬಂಧ ಹರಿದು ವಂಶವೃಕ್ಷಕ್ಕೆ ಸೇರಿಸದಿರಲು ಸಾಧ್ಯವೇ. ನ್ಯಾಯವೇ. ಮನುಷ್ಯ ಅಂದ ಮೇಲೆ, ವ್ಯಕ್ತಿತ್ವಕ್ಕೆ ಹಲವಾರು ಮುಖ, ಬೇರೇ ಆಯಾಮಗಳೂ ಇರುತ್ತವಲ್ಲವೇ. ಹತ್ತು ಹಲವು ಬಗೆಯ ವೈಶಿಷ್ಟ್ಯಗಳೇ ಶೇಷಪ್ಪನ ವ್ಯಕ್ತಿತ್ವದ ವಿಶೇಷ. ಎತ್ತರದ ಆಳು. ಬಡಕಲುಬಡಕಲು ಶರೀರ. ಕೋಲುಮುಖ. ಕೆಂಪು ಕಡಕಿನ ಒಂಟಿ. ನೆರೆತ ಕೂದಲು. ಕ್ರಾಪಿನ ಜೊತೆ ಹಿಂಬದಿ ಜುಟ್ಟು. ಮನೆಯಲ್ಲಿರುವಾಗ ಮಂಡಿವರೆಗೆ ಬಾರಾಪುರದ ಪಂಚೆಕಚ್ಚೆ. ಮಲ್ಲು ಬಟ್ಟೆಯ ಅರ್ಧತೋಳಿನ ಜುಬ್ಬ. ಹೆಗಲ ಮೇಲೊಂದು ಟವಲ್. ಹತ್ತಿರ ಬಂದರೆ ನಂಬರ್ ಮೂರರ ಬೀಡಿ ಪರಿಮಳ. ಸಂಚಾರಕ್ಕೆ ಹೊರಟಾಗ ಬಿಳಿಕಚ್ಚೆಪಂಚೆ, ಫುಲ್‌ಕೈ ನೀಲಿ ಬಣ್ಣದ ಶರ್ಟ್. ಪ್ಯಾಸಿಂಗ್‌ಶೋ ಸಿಗರೇಟು ಘಮಘಮ. ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ. ಹೊತ್ತು ಗೊತ್ತೆಂಬುದಿಲ್ಲದೇ ಮಧ್ಯರಾತ್ರಿಯೇ